ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್.ಚತುಷ್ಪ, ಬೆಂಗಳೂರು.

ಸಂ:ಬಿಬಿಎಂಪಿ/ಮು.ಆ/ಪಿಆರ್/(ಜಿ)3294/2022-23 ದಿನಾಂಕ: 30/5/2022

ರವರಿಗೆ,
ಸರ್ಕಾರದ ಅವರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಮಾನ್ಯರೇ,

ವಿಷಯ:-ದಿನಾಂಕ:20-09-2019ರ ಆದೇಶದನ್ವಯ ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆ ಅಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ "Upgradation of Musical fountain and other developmental works in Kempegowda park ion Ward No:04 of Yelahanka Satellite town sub Division(ಅನುಬಂಧ-6ರ ಕ್ರಮ ಸಂಖ್ಯೆ:249)ಕಾಮಗಾರಿಯ ರೂ.1.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:-1) ಸರ್ಕಾರದ ಆದೇಶ ಸಮಬ್ಯೆನಅಇ 375 ಎಂಎನ್‌ಬ್ಯೆ 2018 ದಿನಾಂಕ: 20-0-2019

2) ಆರ್ಥಿಕ ಮೌಲ್ಯಮಾಪನ ಸಮಿತಿ ಸಭೆ ದಿನಾಂಕ:

3) Work Indent No:BBMP/2021-22/EL/Work_Indent48126

4) ಈ ಕಛೇರಿ ಪತ್ರ ಸಂಖ್ಯೆ: ಮುಖ್ಯ ಆಯುಕ್ತರು/ಪಿಆರ್(ಜಿ)/3294/2021-22 ದಿನಾಂಕ:19-01-2022.

5)ನಅಇ 38 ಎಂಎನ್‌ಬ್ಯೆ 2022(ಇ) ದಿನಾಂಕ:19-02-2022.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Upgradation of Musical fountain and other developmental works in Kempegowda park ion Ward No:04 of Yelahanka Satellite town sub Division ರೂ. 100.00 ಲಕ್ಷಗಳಿಗೆ ಮಾನ್ಯ ಮುಖ್ಯ ಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ಅನುದಾನ ಮಂಜೂರಾಗಿದ್ದು, ದಿನಾಂಕ:17-08-2021 ರಂದು ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಯಲಹಂಕ ವಲಯದಿಂದ ಟೆಂಡರ್ ಕರೆಯಲಾಗಿದ್ದು, ದಿನಾಂಕ:02-12-2021 ರಂದು ನಡೆದ ತಾಂತ್ರಿಕ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ತಾಂತ್ರಿಕ ಬಿಡ್‌ಗೆ ಅನುಮೋದನೆ ನೀಡಲಾಗಿದ್ದು, ದಿನಾಂಕ:18-12-2021 ರಂದು ಆರ್ಥಿಕ ಬಿಡ್ ತೆರೆಯಲಾಗಿದ್ದು, ಸದರಿ ಬಿಡ್‌ನಲ್ಲಿ ಭಾಗವಹಿಸಿ ಕಡಿಮೆ ದರ ನಮೂದಿಸಿರುವ ಶ್ರೀ.M.Vinay Kumar(Vinay Enterprises) ರವರು ನಮೂದಿಸಿರುವ ದರ ರೂ.1,03,33,353.00 ಟೆಂಡರ್‌ಗಿಟ್ಟ ಮೊತ್ತ ರೂ.96.12 ಲಕ್ಷಗಳಿಗೆ ಹೋಲಿಸಿದಾಗ ಶೇ.7.5% ರಷ್ಟು ಹೆಚ್ಚುವರಿಯಾಗಿದ್ದು, ದರ ಸಂಧಾನದ ನಂತರ ರೂ.1,00,90,519.20(4.97%) ಹೆಚ್ಚುವರಿ ದರಗಳಿಗೆ ಒಪ್ಪಿದ್ದು ದಿನಾಂಕ: 06-01-2022 ರಂದು ನಡೆದ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿ ಸಭೆಯಲ್ಲಿ ಸದರಿಯವರು ದರ ಸಂಧಾನದ ನಂತರ ಒಪ್ಪಿರುವ ದರಗಳಿಗೆ ಟೆಂಡರ್ ಅನುಮೋದನೆ ಹಾಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರದ ಮಟ್ಟದಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಸಮಿತಿ ಮುಂದೆ ಮಂಡಿಸಲು ತೀರ್ಮಾನಿಸಿ ಉಲ್ಲೇಖ(4) ರಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ(5)ರ ಪತ್ರದಲ್ಲಿ ರೂ.10.00 ಕೋಟಿಗಳಿಗಿಂತ ಕಡಿಮೆಯ ಪ್ಯಾಕೇಜ್‌ಗಳನ್ನು ಮಾಡಿ ಟೆಂಡರ್ ಆಹ್ವಾನಿಸಿದ್ದಲ್ಲಿ ಪ್ರಸ್ತಾವನೆಯಲ್ಲಿ ಅದಕ್ಕೆ ಸೂಕ್ತ ಕಾರಣಗಳನ್ನು ದಾಖಲಿಸಿ ಸರ್ಕಾರಕ್ಕೆ ಸಲ್ಲಿಸಲು ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿ ಸದರಿ ಕಾಮಗಾರಿಯು ವಿದ್ಯುತ್ ಕಾಮಗಾರಿಯಾಗಿದ್ದು, ಇತರೇ ಸಿವಿಲ್ ಕಾಮಗಾರಿಗಳೊಂದಿಗೆ ಪ್ಯಾಕೇಜ್ ಮಾಡಲು ಸಾಧ್ಯವಿರುವುದಿಲ್ಲ ಈ ಕಾರಣದಿಮದ ಸದರಿ ಕಾಮಗಾರಿಗೆ ಪ್ರತ್ಯೇಕವಾಗಿ ಟೆಂಡರ್ ಕರೆಯಲಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಈಗಾಗಲೇ ಉಲ್ಲೇಖ(4)ರಂತೆ ಸಲ್ಲಿಸಲಾಗಿರುವ ಟೆಂಡರ್‌ಗೆ ಆನುಮೋದನೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.